ಶಿರಸಿ ತಾಲೂಕಿನ ಸಣ್ಣಕೇರಿ ಎಂಬ ಗ್ರಾಮದಲ್ಲಿ ಹುಟ್ಟಿ ಬೆಳೆದ ಪೂರ್ಣಿಮಾ ಭಟ್ಟ ಸಣ್ಣಕೇರಿ ಪ್ರಸ್ತುತ ಇಂಗ್ಲೆಂಡ್‌ನಲ್ಲಿ ವಾಸಿಸುತ್ತಿದ್ದಾರೆ. ಪತ್ರಿಕೋದ್ಯಮದಲ್ಲಿ ಪದವಿ ಪಡೆದ ಅವರು ಪತ್ರಕರ್ತೆಯಾಗಿಯೂ ಕೆಲಸ ಮಾಡಿದ್ದರು. ಕಥೆ ಕವನಗಳನ್ನು ಬರೆಯುವ ಹವ್ಯಾಸ ಅವರ ಜೊತೆಗಿದೆ. ಇಂಗ್ಲೆಂಡ್‌ನಲ್ಲಿ ಮಕ್ಕಳಿಗೆ ಕನ್ನಡ ಹೇಳಿಕೊಡುವ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ.

ಕಾಲಲ್ಲಿ ತಳ್ಳಿದ. 'ಓಹ್, ಮರ್ತುಹೋದೆ. ಬೆಳಗ್ಗೆ ಬಿನ್‌ಗೆ ಹಾಕ್ತೇನೆ. ಅದು ಗಲೀಜೇನಾಗಿಲ್ಲ' ಎಂದುಬಿಟ್ಟಳು ಜ್ಯೋತ್ಸ್ನಾ. ಅಷ್ಟೇ ಸಾಕಯ್ತು. ಮುಂದಿನ ಮೂರುದಿನ ಜ್ವಾಲಾಮುಖಿ ಬಿಸಿಯುಗುಳ್ತುತ್ತಲೇ ಇತ್ತು. ಕಂಬಳಿ ಸುರುಳಿಯಂತ ಹುಬ್ಬನ್ನ ಗಂಟಿಕ್ಕಿ ಏರುದನಿಯಲ್ಲಿ ಹರೀಶ ಮಾತಾಡುವಾಗ ಜ್ಯೋತ್ಸ್ನಾ ಪೂರ್ತಿ ತಬ್ಬಿಬ್ಬು. ಅವಳೆದೆಯ ಮೂಲೆಯಲ್ಲಿ ಯಾತನೆ. ಅಷ್ಟಾದರೂ ತಾನು ಇದನ್ನು ಗೆಲ್ಲಬಲ್ಲೆ ಎಂಬ ಉಮೇದು.

ಗೂಡು ಚದುರಿದ ಗುಬ್ಬಚ್ಚಿಯಂತಾದ ಇಂಥದ್ದೇ ದಿನಗಳಲ್ಲಿ ಊರಿನ ಮನೆಯಲ್ಲಿರುವ 'ಮೇಲಿನಮೆತ್ತು'ಎಂದು ಕರೆಸಿಕೊಳ್ಳುವ ಉಪ್ಪರಿಗೆಯ ಕೋಣೆ ಮತ್ತು ಅದಕ್ಕಿದ್ದ ಒಂದೇ ಒಂದು ಮುದ್ದು ಮಾಂತ್ರಿಕ ಕಿಟಕಿ ತುಂಬ ನೆನಪಾಗುತ್ತಿತ್ತು ಜ್ಯೋತ್ಸ್ನಾಳಿಗೆ. ಅವಳ ಹರೆಯದಲ್ಲಿ, ಬೇಸರದ ದಿನಗಳಲ್ಲಿ ಮೇಲಿನಮಾಳಿಗೆ ಹತ್ತಿ ಕೂತ ಅರ್ಧ ಗಂಟೆಗೆಲ್ಲ ಕಂಬಿ ಬಿಟ್ಟು ಖಿನ್ನವಾದ ಮನಸ್ಸು ಮತ್ತೆ ಕಂಬಿಗೆ ವಾಪಾಸ್ಸಾದ ದಿನಗಳು ಸಾಕಷ್ಟಿದ್ದವು. ಹಿಸೆ ಪಂಚಾಯ್ತಿಯಲ್ಲಿ ಚಿಕ್ಕಪ್ಪನ ಶಾಣೆತನದಿಂದ ದಿನಬಳಕೆಗೆ ಏನೇನೂ ಅನುಕೂಲವಾಗದಂತಹ ಈ ದೊಡ್ಡದಾದ ಮೇಲಿನಮಾಳಿಗೆ ಅಪ್ಪನ ಪಾಲಿಗೆ ಬಂದಿದ್ದನ್ನ ಕಣ್ಣಾರೆ ಕಂಡಿದ್ದಳು. ಮುತ್ತಜ್ಜನ ಕಾಲದಲ್ಲಿ ಚೌತಿಯ ಗಮ್ಮತ್ತಿಗೆ ಗಣೇಶನನ್ನು ಕೂಡ್ರಿಸಲು ಬಳಸುತ್ತಿದ್ದ ಹುರುಬಲೆದ್ದ ಮೆಟ್ಟಿಲುಗಳು, ಬಾವಲಿಗಳ ಹಿಕ್ಕೆಯಿಂದ ಅಲಂಕೃತ ಕೋಳು ಕಂಬ, ಆ ಕಂಬಕ್ಕೆ ಕಟ್ಟಿದ - ಅಪ್ಪ ಅಮ್ಮ, ಚಿಕ್ಕಮ್ಮ ಚಿಕ್ಕಪ್ಪರ ಮದುವೆಯದೇ ಇರಬೇಕು - ಬಣ್ಣಗೆಟ್ಟ ಬಾಸಿಂಗ ತೊಂಡ್ಲು, ಮುತ್ತಜ್ಜಿಯ ನುಗ್ಗಾದ ಟ್ರಂಕು, ಹೊಗೆ ಹಿಡಿದ ಬೆತ್ತದಪೆಟ್ಟಿಗೆಗಳು, ಅದರಲ್ಲಿದ್ದ ಬಾಯೊಡಕು ಮೈಯ್ಯೊಡಕಿನ ಹಿತ್ತಾಳೆ ಪಾತ್ರೆಗಳು ಇವೂ ಎಲ್ಲ ಅವಳ ಅಪ್ಪಅಮ್ಮನ ಪಾಲಿಗೇ ಬಂದಿತ್ತು ಮೇಲಿನಮಾಳಿಗೆಯೊಂದಿಗೆ. ಈ ಮೇಲಿನಮೆತ್ತೆಂದರೆ ಜ್ಯೋತ್ಸ್ನಾಳ ಅಂತಃಪುರ. ಇಲ್ಲಿದ್ದ ಒಂದೇ ಒಂದು ಮರದ ಚಿತ್ತಾರದ ಕಿಟಕಿ ಎಂದರೆ, ಒಳಗಿನ ಹುಳುಕನ್ನು ಅಲ್ಲಿಗೇ ಮುಗಿಸಿ ಹೊರಗಿನ ಸೊಬಗನ್ನು ಮಾತ್ರ ಕಾಣತೋರುವ ಗಾರುಡಿಗ. ಆ ಕಿಟಕಿಯ ಪಟ್ಟಿಯ ಮೇಲೆ ಒಂದರ್ಧಗಂಟೆ ಕಾಲು ಮಡಚಿ ಕೂತು ಹೊಸ ಹುರುಪಿನಿಂದ ಕೆಳಗಿಳಿದು ಬರುತ್ತಿದ್ದಳು.

ಇಂಥ ಅತೀಂದ್ರಿಯ ಶಕ್ತಿಯಿದ್ದ ಕಿಟಕಿಯೊಂದು ಇಂಗ್ಲೆಂಡಿನ ಇರುವಿನಲ್ಲಿ ಇರದೇ ಇದ್ದುದು ಜ್ಯೋತ್ಸ್ನಾಳನ್ನು ತುಂಬ ಕಾಡುತ್ತಿತ್ತು.

ಹರೀಶ ಬೆಳಗ್ಗೆ ಆಫೀಸಿಗೆ ಹೊರಟನೆಂದರೆ ಜ್ಯೋತ್ಸ್ನಾ ಹೈಸ್ಟ್ರೀಟ್‌ಗುಂಟ ನಡೆಯುತ್ತಿದ್ದಳು. ಎಲ್ಲ ಸಾಲಂಗಡಿಗಳ ಮೇಲೂ ಕಣ್ಣೋಡಿಸುತ್ತಿದ್ದಳು. ವೇಕೆನ್ಸಿ ತಲೆಬರಹದ ಅಡಿ ಇರುವ ಈಮೇಲ್ ಐಡಿಗಳನ್ನು ನೋಟ್ ಮಾಡಿಟ್ಟುಕೊಳ್ಳುತ್ತಿದ್ದಳು. ಹೀಗೆ ನಡೆಯುತ್ತ ಮಹಾಮೇರು ಸನ್‌ಬರಿ ಕೌಂಟಿ ಲೈಬ್ರರಿ ತಲುಪುತ್ತಿದ್ದಳು. ಪತ್ರಿಕೆಗಳನ್ನು ಅರ್ಥವಾದಷ್ಟು ಓದಿ ನಂತರ ಓಹೆನ್ರಿಯ ಪುಸ್ತಕವನ್ನು ಹಿಡಿದು ವಾಲ್-ಮೌಂಟೆಡ್ ಹೀಟರಿನ ಬಳಿ ಕೂಡ್ರುತ್ತಿದ್ದಳು. ಕಾಲೇಜಿನ ದಿನಗಳಲ್ಲಿ ಕೇಳಿದ, ಓದಿದ ಓಹೆನ್ರಿ ಈ ದೇಶದಲ್ಲಿ ಅವಳಿಗೆ ನೆಂಟನಂತೆ ಅನ್ನಿಸುತ್ತಿದ್ದ.

ಒಂದು ಚಳಿಗಾಲದ ಗುರಿಯಿರದ ಮುಂಜಾನೆ ಅದು. ಜ್ಯೋತ್ಸ್ನಾ ಮನೆಗಳ ಮುಂದೆ ಸಿಂಗಾರಗೊಂಡ ಸೀರಿಯಲ್ ಸೆಟ್ ದೀಪಗಳನ್ನು ನೋಡುತ್ತ ಹೋಗುತ್ತಿದ್ದಳು. ರಾತ್ರಿ ಮಾತ್ರ ಉರಿಯುವ ಈ ದೀಪಗಳು ಬೆಳಗಿನ ಆ ಹೊತ್ತಲ್ಲಿ ಬಣ್ಣದ ಸಂಡಿಗೆಗಳನ್ನು ಬಳ್ಳಿಕಟ್ಟಿ ಜೋಡಿಸಿಟ್ಟಂತೆ ಕಾಣಿಸುತ್ತಿದ್ದವು. ಮನೆಗಳ ಸಾಲು ಮುಗಿದ ಮೇಲೆ ರಸ್ತೆಯ ಎಡಭಾಗದಲ್ಲಿ ಒಂದು ಗಿಡಗಳ ನರ್ಸರಿ. ಅಲ್ಲಿ ಗಾಜಿನ ಗೋಡೆಯಮೇಲೆ 'ವೇಕೆನ್ಸಿ ಫಾರ್ ವಾಲಂಟರಿ ವರ್ಕ್' ಎನ್ನುವ ಬೋರ್ಡ್ ಅವಳ ಕಣ್ಣಿಗೆ